ತಲೆಹೊರೆಯನ್ನು ಇಳಿಸಿ ಆ ಗುಂಡಿಗೆ ಇಳಿದು ಮುಟ್ಟಾಳೆಯಲ್ಲಿ ನೀರು ಬಗೆದು ಕುಡಿಯುವುದು, ನಾವು ಮಕ್ಕಳೆಲ್ಲಾ ಅಬ್ರುಕೆ ಮರವೇರಿ ಹಣ್ಣು ಕೀಳುವುದೆಲ್ಲಾ ಇತ್ತು. ಸೋಂಪ, ಶಾಂತಣ್ಣ, ಬಟ್ಯಪ್ಪ ಮರವೇರಿದ್ರೆ ನಾನು ಅದೇ ಜಾಗದಲ್ಲಿ ಹುದುಗಿದ್ದ ಪ್ರಾಚೀನ ಭೂತಮಂದಿರದ ಕುರುಹುಗಳನ್ನು ಹುಡುಕುತ್ತಿದ್ದೆ. ಮುರಕಲ್ಲಿನ ಪಾಯ, ಬಿದ್ದ ಕಂಬಗಳು ಅಲ್ಲೆಲ್ಲಾ ಇದ್ದುವು. ಅವೆಲ್ಲವನ್ನು ಮುಟ್ಟಲು ಭಯವಾಗುತ್ತಿತ್ತು. ಅಲ್ಲಿಂದ ಮೇಲೆ ಹತ್ತಿ ಒಂದು ಮೈಲು ಎಡಕ್ಕೆ ತಿರುಗಿದ್ರೆ ಮತ್ತಷ್ಟು ದುರ್ಗಮ ಕಾಡೊಳಗಡೆ ಎರಡು ತೆಂಗಿನ ಮರಗಳಿದ್ದು ಅವುಗಳನ್ನು ನೆಟ್ಟವರು ಮರಾಠಿಗಳಂತೆ. ಆ ಕಾರಣಕ್ಕೇ ಆ ಕಾಡುಭಾಗವನ್ನು ಮರಾಠಿಮೂಲೆಯೆಂದು ಕರೆಯುತ್ತಾರೆ. ನೂರು ಅಡಿಗಿಂತಲೂ ಹೆಚ್ಚು ಎತ್ತರವಿರುವ ಆ ಎರಡು ತೆಂಗಿನ ಮರಗಳಲ್ಲಿ ಯಥೇಚ್ಛ ಕಾಯಿಗಳಿರುತ್ತಿದ್ದು ಈಗಲೂ ಆಗಾಗ ಕಟ್ಟಿಗೆ, ಬೇಟೆಗೆಂದು ಹೋಗುವವರು ಮರಹತ್ತಿ ಅವುಗಳನ್ನು ಕೀಳುವುದಿದೆ. ಹಾಗೆ ತುದಿಯೇರಿ ಬೊಂಡ ಕಿತ್ತು ಕೆಳಗಡೆ ಎಸೆದ್ರೆ ಕುಡಿಯಲು ನೀರು ಸಿಗುವುದಿಲ್ಲ. ಅಷ್ಟೊಂದು ಎತ್ತರದಿಂದ ಬೀಳುವ ಬೊಂಡ ನೆಲದ ಪಾದೆಗೆ ಬಡಿದು ಒಡೆದು ಹೋಗುತ್ತದೆಯಂತೆ. ತೆಗೆದ ಎಳೆನೀರು ಕುಡಿಯಲು ಒದಗಬೇಕಾದ್ರೆ ಅವುಗಳನ್ನು ಹಿಡಿದುಕೊಂಡೇ ಇಳಿಯಬೇಕು ಎನ್ನುತ್ತಿದ್ದ ನಮ್ಮ ಅಡಿಕೆ ತೆಗೆಯುವ ದಾಮು. ಅಲ್ಲಿ ನೂರಾರು ವರ್ಷಗಳ ಹಿಂದೆ ಮನೆ ಮಾಡಿ ಬದುಕಿದ್ದ ಮೂಲನಿವಾಸಿಗಳು ಯಾರು? ಮುಂದೆ ಏನಾದ್ರು? ಅವರ ಮೂಲದವರು ಏನಾದ್ರು? ಎಲ್ಲಾದರೂ ಇದ್ದಾರೆಯೇ? ನಮ್ಮೂರಲ್ಲಿ ಯಾರಿಗೂ ಗೊತ್ತಿಲ್ಲ. ನಮ್ಮನೆಯ ಬೆನ್ನಿಗಿದ್ದ ಏರಡ್ಕದ ತುದಿಗೆ ಮೊನ್ನೆ ಮೊನ್ನೆಯವರೆಗೆ ಆ ಎರಡು ತೆಂಗಿನ ಮರಗಳು ಅಸ್ಪಷ್ಟವಾಗಿ ಕಾಣುತ್ತಿದ್ದವು.

ಏನೋ ಹೇಳಲು ಹೊರಟು ಇನ್ನೆಲ್ಲಿಗೋ ತಲುಪಿದೆ. ಕಾಡಿನ ಶಕ್ತಿಯೇ ಅದು. ದಿಕ್ಕು ತಪ್ಪಿಸುತ್ತದೆ. ಹತ್ತಡಿ ಮುಂದಕ್ಕೆ ಹೋಗಿ ತಿರುಗಿ ನೋಡಿದ್ರೆ ಬಂದ ದಾರಿ ಪೂರ್ತಿ ಯಾವ ಸಾಕ್ಷಿ ಸವಲು ಇಲ್ಲದಂತೆ ಮುಚ್ಚಿಕೊಂಡಿರುತ್ತದೆ. ನಾನು ಹೇಳಲು ಹೊರಟದ್ದು ಅಜ್ಜಿಕಲ್ಲಿನ ಭೂತದ ಬಗ್ಗೆ.

ಬಳ್ಳು, ಸೋಂಪ ಹೇಳಿದ ದೈವದ ಕಥೆಯನ್ನು ನಿರ್ಲಕ್ಷಿಸಲೇ? ಯಾಕೆ ಇಂಥ ಕತೆಯನ್ನು ಇಲಾಖೆಯವರೇ ಹಬ್ಬಿಸಿರಬಾರದು? ಗಿಡಗಳು ದೊಡ್ಡದಾಗಿವೆ, ನೆಟ್ಟಾಗ ಜನ ದನಗಳು ನುಗ್ಗಬಾರದೆಂದು ಹಾಕಿದ ತಂತಿಬೇಲಿ ಕುಂಬಾಗಿದೆ. ಅಲ್ಲಲ್ಲಿ ಬೇಲಿ ಇತ್ತೆಂಬುದಕ್ಕೆ ಸಾಕ್ಷಿಗಳೇ ಇಲ್ಲವಾಗಿವೆ. ಇಂಥ ಸ್ಥಿತಿಯಲ್ಲಿ ರಬ್ಬರ್ ಇಲಾಖೆಯೇ 'ಭೂತದ ಕಥೆ' ಹುಟ್ಟಿಸಿ ತೋಟಕ್ಕೆ ಬರುವ ಜನರನ್ನು ಭಯದಿಂದ ನಿರ್ಬಂಧಿಸಿರಬಹುದೇ? 'ರಬ್ಬರ್ ತೋಟದೊಳಗೆ ರಣಪಿಶಾಚಿ, ಪೀಡೆಗಳಿವೆ' ಎಂದು ಹೇಳಿಬಿಟ್ಟರೆ ಜನ ಊರು ಬಿಟ್ಟು ಆ ಕಡೆ ಹೋಗುವುದನ್ನೇ ನಿಲ್ಲಿಸಿಬಿಡಬಹುದೆಂಬ ರಣೋಪಾಯ ಇರಬಹುದೆಂದು ಅಂದಾಜಿಸಿದೆ.

ಇಲಾಖೆ ಕಾಡು ಕಡಿದು ಗಟ್ಟಿಮುಟ್ಟಾದ ಮರಮಟ್ಟುಗಳನ್ನು ಸಾಗಿಸಿ ಅಳಿದುಳಿದ ಅಪ್ರಯೋಜಕ ಕುತ್ತಿ ಕೊಂಬೆ ರೆಂಬೆ ಪೊದೆಗಳನ್ನು ಅಲ್ಲಲ್ಲೇ ಒಟ್ಟಿ ರಾಶಿ ಹಾಕಿ ಬೆಂಕಿ ಕೊಟ್ಟಿತ್ತು. ಅಂಥ ಬೆಂಕಿ ಬಹುದಿನಗಳವರೆಗೆ ಉರಿದು ಕಿಡಿಕಾರಿ ರಾತ್ರಿ ಹೊತ್ತು ಅದನ್ನೇ ಕೊಳ್ಳಿದೆವ್ವ ಎಂದೆಲ್ಲಾ ಮಾತನಾಡಿದವರು, ಭಯ ಹುಟ್ಟಿಸಿದವರೂ ಇದ್ದರು. ಈಗ ಅಂಥ ಬೆಂಕಿ ಕಾಡ್ಗಿಚ್ಚು ಇಲ್ಲ. ರಬ್ಬರ್ ಗಿಡ ಬೆಳೆದು ಹತ್ತು ಹನ್ನೆರಡು ವರ್ಷಗಳೇ ಆದುವು.

ದೇರ್ಲ, ಇಳಂತಾಜೆಯ ಯಾರೇ ಆಗಲಿ ಆಗ ನಡೆದೇ ಕೌಡಿಚ್ಚಾರು ಎಂಬ ಕಿರು ಪೇಟೆಗೆ ಹೋಗಿ ಅಲ್ಲಿಂದ ಪುತ್ತೂರು,

